| ಕೃಷಿ ವಿಶ್ವವಿದ್ಯಾನಿಲಯ, ಬೆಂಗಳೂರು ಮತ್ತು ಭಾರತೀಯ ಹವಾಮಾನ ಇಲಾಖೆ |
|---|
| ಗ್ರಾಮೀಣ ಕೃಷಿ ಹವಾಮಾನ ಸೇವಾ<br>ಕೃಷಿ ಹವಾಮಾನ ಕ್ಷೇತ್ರ ವಿಭಾಗ (ಖಟಟ)<br>ನಾಗನಹಳ್ಳಿ, ಮೈಸೂರು 570 003 |

ದಿನಾಂಕ: 14-06-2024

## ಭಾರತೀಯ ಹವಾಮಾನ ಇಲಾಖೆಯ ಪ್ರಕಾರ ಮೈಸೂರು ಜಿಲ್ಲೆಯ ಹವಾಮಾನ ಮತ್ತು ಕೃಷಿ ಕಾರ್ಯಕ್ರಮಗಳ ವರದಿ ಪತ್ರಿಕೆ

### ಹವಾಮಾನದ ಮುನ್ಸೂಚನೆ (15-06-2024 ರಿಂದ 19-06-2024)

| ಕಚಿಡಿಚಿಟಜಣಜಥಿ | 15.06.2024 | 16.06.2024 | 17.06.2024 | 18.06.2024 | 19.06.2024 |
|---|---|---|---|---|---|
| ಮಳೆ (ಮಿ.ಮೀ) | 5 | 2 | 5 | 8 | 9 |
| ಗರಿಷ್ಠ ಉಷ್ಣಾಂಶ ($^0$ಸೆ) | 30 | 30 | 30 | 30 | 28 |
| ಕನಿಷ್ಠ ಉಷ್ಣಾಂಶ ($^0$ಸೆ) | 16.8 | 17.1 | 17.2 | 18 | 17 |
| ಮೋಡ (ಆಕ್ಟ್ಸ್) | 8 | 8 | 8 | 8 | 8 |
| ಗರಿಷ್ಠ ಗಾಳಿಯ ತೇವಾಂಶ (%) | 88 | 85 | 87 | 86 | 89 |
| ಕನಿಷ್ಠ ಗಾಳಿಯ ತೇವಾಂಶ (%) | 50 | 44 | 49 | 52 | 73 |
| ಗಾಳಿಯ ವೇಗ (ಕಿ.ಮೀ/ಗಂಟೆ) | 17 | 16 | 17 | 18 | 17 |
| ಗಾಳಿಯ ದಿಕ್ಕು (ಡಿಗ್ರಿ) | 248 | 248 | 248 | 248 | 248 |

**ಮುನ್ಸೂಚನೆಯ ಸಾರಾಂಶ**

ಭಾರತೀಯ ಹವಾಮಾನ ಇಲಾಖೆಯ ಪ್ರಕಾರ ಈ ವಾರದ ಮುನ್ಸೂಚನೆ ಮೈಸೂರು ಜಿಲ್ಲೆಯಲ್ಲಿ ದಿನಾಂಕ: 15-06-2024 ರಿಂದ 19-06-2024 ವರೆಗೆ ಮೋಡ ಕವಿದ ವಾತಾವರಣವಿದ್ದು, ತುಂತುರು ಮಳೆ ಬರುವ ಸಂಭವವಿದೆ. ಗರಿಷ್ಠ ಉಷ್ಣಾಂಶ 28-30 °C ಮತ್ತು ಕನಿಷ್ಠ ಉಷ್ಣಾಂಶ 16.8-17.1 °C ವರೆಗೆ ದಾಖಲಾಗುವ ಸಾಧ್ಯತೆಯಿದೆ. ಬೆಳಗಿನ ಗಾಳಿಯ ತೇವಾಂಶ ಶೇ. 85-89 % ವರೆಗೆ ಮತ್ತು ಮಧ್ಯಾಹ್ನದ ತೇವಾಂಶ ಶೇ. 44-73% ವರೆಗೆ ಮತ್ತು ಗಾಳಿಯು ಗಂಟೆಗೆ 16-18 ಕಿಲೋಮೀಟರ್ ವೇಗದಲ್ಲಿ ಬೀಸುವ ಸಾಧ್ಯತೆಯಿದೆ.

### ಕೃಷಿ ಚಟುವಟಿಕೆಗಳ ಬಗ್ಗೆ ಅನುಸರಿಸಬಹುದಾದ ವಿವರ:

| ಬೆಳೆ/ ಜಾನುವಾರಗಳು | ರೋಗ ಮತ್ತು ಕೀಟ | ಹಾನಿ ಲಕ್ಷಣಗಳು | ಕೃಷಿ ಸಲಹೆಗಳು |
|---|---|---|---|

**ಮೇ ತಿಂಗಳಲ್ಲಿ ಬೆಳೆಯಬಹುದಾದ ಬೆಳೆಗಳು**

ರಾಗಿ: ಇಂಡಾಫ್-9, ಜಿ.ಪಿ.ಯು-45, 48.

ಮೆಕ್ಕೆಜೋಳ: ಹೇಮಾ, ನಿತ್ಯಶ್ರೀ, ಎಂ.ಎ.ಹೆಚ್-14-5

ಪಾಪ್ ಕಾರ್ನ್: ಅಂಬರ್

ಶಕ್ತಿಮಾನ್ ಜೋಳ: ಸಿ.ಎಸ್.ವಿ-4, ಸಿ.ಎಸ್.ಎಚ್-5, ಸಿ.ಎಸ್.ಎಚ್-9

ನೆಲಗಡಲೆ: ಜಿಕೆವಿಕೆ-5, ಕೆ.ಸಿ.ಜಿ-6 (ಚಿಂತಾಮಣಿ-6), ಜಿ.ಪಿ.ಬಿ.ಡಿ-4, ಐ.ಸಿ.ಜಿ.ವಿ-91114, ಟಿ.ಎಮ್.ವಿ-2, ಜೆ.ಎಲ್-24

ಸೋಯಾಅವರೆ: ಎಂ.ಎ.ಯು.ಎಸ್-2 (ಪೂಜಾ), ಕರುಣೆ (ತರಕಾರಿ ಸೋಯಾಅವರೆ), ಕೆ.ಬಿ.ಎಸ್-23

ತೊಗರಿ: ಬಿ.ಆರ್.ಜಿ-1, ಬಿ.ಆರ್.ಜಿ -2, ಬಿ.ಆರ್.ಜಿ -3, ಬಿ.ಆರ್.ಜಿ -4, ಬಿ.ಆರ್.ಜಿ -5, ಐಸಿಪಿ-7035, ಟಿ.ಟಿ.ಬಿ-7, ಹೈದರಾಬಾದ್-3ಸಿ

ಹೆಸರು: ಪಿ.ಎಸ್-16, ಪೂಸಾ ಬೈಸಾಕಿ, ಪಿ.ಡಿ.ಎಂ-84-178, ಕೆ.ಕೆ.ಎಂ-3

ಉದ್ದು: ಕರಗಾಂವ್-3, ಟಿ-9, ರಶ್ಮಿ, ಎಲ್‌ಬಿಜಿ-791

ಅಲಸಂದೆ: ಟಿ.ವಿ.ಎಕ್ಸ್–944–02–ಇ,  ಕೆ.ಬಿ.ಸಿ–1, ಕೆ.ಬಿ.ಸಿ–2, ಕೆ.ಬಿ.ಸಿ–9, ಐ.ಟಿ–98456–1, ಕೆ.ಎಂ–05, ಪಿಜಿಸಿಪಿ–6
ತೋಟಗಾರಿಕಾ ಬೆಳೆಗಳು: ಬಾಳೆ, ಅಡಿಕೆ, ಮೆಣಸಿನಕಾಯಿ, ಟೊಮೆಟೊ, ಆಲೂಗಡ್ಡೆ, ಶುಂಠಿ, ಅರಿಶಿನ
ಮೇವಿನ ಬೆಳೆಗಳು:
ಮೇವಿನ ಜೋಳ: ಆಫ್ರಿಕನ್ ಟಾಲ್
ಜೋಳ: ಎಂ.ಪಿ. ಚಾರಿ, ಪೂಸಾ ಚಾರಿ, ಜೆಎಸ್–3, ಜೆಎಸ್–20, COFS–29.
ಸಜ್ಜೆ: ದೀನ ಬಂಧು–49 ಎ
ಅಲಸಂದೆ: ಕೆಬಿಸಿ–2

ಬೀಜೋಪಚಾರ – ಹೆಸರು, ಉದ್ದು, ಅಲಸಂದೆ, ತೊಗರಿ
ಬಿತ್ತನೆಗೆ ಮೊದಲು ಎಕರೆಗೆ ಬೇಕಾಗುವ ಬೀಜಕ್ಕೆ 200 ಗ್ರಾಂ. ರೈಜೋಬಿಯಂ ಹಾಗೂ 200 ಗ್ರಾಂ ರಂಜಕ ಕರಗಿಸುವಜೀವಾಣುವಿನಿಂದ ಉಪಚರಿಸಿ.

| | | |
|---|---|---|
| ತೆಂಗು | ರುಗೋಸ್ ಬಿಳಿನೊಣ | • ಸೋಂಕಿತ ಸಸ್ಯಗಳ ಎಲೆಗಳ ಮೇಲೆ ಭಾರೀ ಮಸಿ ಅಚ್ಚು ಶೇಖರಣೆಯನ್ನು ಹೊರಹಾಕಲು ಪಿಷ್ಟದ ದ್ರಾವಣವನ್ನು (1%) ಸಿಂಪಡಿಸುವುದು.<br>• ವಯಸ್ಕ ಬಿಳಿ ನೊಣಗಳನ್ನು ಬಲೆಗೆ ಬೀಳಿಸಲು ಹಳದಿ ಜಿಗುಟಾದ ಬಲೆಗಳ ಬಳಕೆ<br>• ತೀವ್ರವಾದ ಬಾಧೆಯ ಸಂದರ್ಭದಲ್ಲಿ, ಬೇವಿನ ಎಣ್ಣೆಯನ್ನು 0.5% ಸಿಂಪಡಿಸಿ |
| ಉದ್ದು | ಸಸ್ಯಹೇನು | ನೂರಾರು ಸಸ್ಯಹೇನುಗಳು ಸುಳಿ, ಎಲೆ, ಹೂ, ಮೊಗ್ಗು, ಕಾಯಿಗಳಿಂದ ರಸ ಹೀರುತ್ತಿರುತ್ತವೆ. ಎಲೆಗಳು ಮುದುಡುವುದು, ಕಾಯಿಗಳಲ್ಲಿನ ಬೀಜ ಚೀಕಲಾಗುವುದು. ಕೆಳಗಿನ ಎಲೆಗಳಲ್ಲಿ ಕಪ್ಪು ಬೂಷ್ಟು ಬೆಳೆಯುವುದು.<br>ಸಸ್ಯಹೇನಿನ ಬಾದೆ ಕಂಡು ಬಂದಾಗ ಲೀ. ನೀರಿಗೆ 1.7 ಮಿಲೀ ಡೈಮಿಥೋಯೇಟ್ 30 ಇಸಿ. ಸೇರಿಸಿ ಸಿಂಪಡಿಸುವುದು. ಎಕರೆಗೆ 250 ಲೀ. ಸಿಂಪರಣಾ ದ್ರಾವಣವನ್ನು ಸಿಂಪಡಿಸಬೇಕು. |
| ಅಲಸಂದೆ | ಕಾಯಿಕೊರಕ | ಎಳೆ ಕಾಯಿಗಳ ಮೇಲೆ ಲೀ. ನೀರಿಗೆ ಎರಡು ಮಿ.ಲೀ. ಕ್ಲೋರೋಪೈರಿಫಾಸ್ – 20 ಇಸಿ. ಸೇರಿಸಿ ಸಿಂಪಡಿಸುವುದು. ಎಕರೆಗೆ 250 ರಿಂದ 300 ಲೀ. ಸಿಂಪರಣಾ ದ್ರಾವಣ ಬಳಸಿ. |
| ಕಬ್ಬು | ಬೀಜೋಪಚಾರ | ಬಿತ್ತನೆ ತುಂಡುಗಳನ್ನು ಪ್ರತಿ ಲೀ. ನೀರಿಗೆ ಒಂದು ಗ್ರಾಂ ಕಾರ್ಬೆಂಡೆಜಿಂ ಬೆರೆಸಿದ ದ್ರಾವಣದಲ್ಲಿ 15 ನಿಮಿಷ ಅದ್ದಿ ಬಿತ್ತನೆ ಮಾಡಿ. |
| ಮೆಣಸಿನಕಾಯಿ | ಸಸ್ಯ ಪ್ರಚೋದಕಗಳ ಬಳಕೆ | ಸಾಮಾನ್ಯವಾಗಿ ಮೆಣಸಿನ ಗಿಡಗಲ್ಲಿ ಹೂವು ಬಹಳಷ್ಟು ಉದುರಿ ಹೋಗುವುದುಂಟು, ಇದನ್ನು ನಿಯಂತ್ರಿಸಲು ಎನ್.ಎ.ಎ. (ಪ್ಲಾನೋಫಿಕ್ಸ್) ಅನ್ನು 50 ಪಿ. ಪಿ. ಎಂ. (50 ಮಿ. ಗ್ರಾಂ ಪ್ರತಿ ಲೀಟರ್ ನೀರಿಗೆ) ಪ್ರಮಾಣದಲ್ಲಿ ಹೆಚ್ಚು ಹೂವಿರುವ ಸಮಯದಲ್ಲಿ ಸಿಂಪರಿಸಿದರೆ ಹೂವು ಉದುರುವುದು ನಿಲ್ಲುತ್ತದೆ ಮತ್ತು ಇಳುವರಿ ಹೆಚ್ಚುತ್ತದೆ. |
| ಟೊಮೆಟೊ | ಎಲೆ ಸುರಂಗದ ಕೀಟ (ನಾಗಮುದ್ರೆ ಕೀಟ) | ಮರಿ ಹುಳುಗಳು ಎಲೆಗಳಲ್ಲಿ ರಂಗೋಲಿಯಂತೆ ಸುರಂಗ ಮಾಡಿ ಹಸಿರು ಭಾಗವನ್ನು ತಿನ್ನುತ್ತವೆ. ಅಂತಹ ಎಲೆಗಳ ಮೇಲೆ ಹಾವಿನಾಕಾರದ ಬಿಳಿಮಚ್ಚೆಗಳು ಕಾಣುತ್ತವೆ.<br>ಇಮಿಡಾಕ್ಲೋಪ್ರಿಡ್ 17.8 ಎಸ್ಎಲ್ – 0.3 ಮಿಲೀ. /ಲೀ. ನೀರಿಗೆ<br>ಅಥವಾ<br>ಟ್ರೈಯಜೋಫಾಸ್ 40 ಇಸಿ. – 2.0 ಮಿಲೀ. /ಲೀ. ನೀರಿಗೆ ಸೇರಿಸಿ ಪೀಡೆ ಕಾಣಿಸಿ ಕೊಂಡಾಗ; ಸಿಂಪರಣೆ ಎಕರೆಗೆ 200 ರಿಂದ 250 ಲೀಟರ್ ಸಿಂಪರಣಾ ದ್ರಾವಣ ಬೇಕಾಗುತ್ತವೆ. |
| ಟೊಮೆಟೊ | ಹಣ್ಣು ಕೊರೆಯುವ ಹುಳು | ಸಣ್ಣ ಮರಿಗಳು ಹೂ ಮೊಗ್ಗುಗಳನ್ನು ಕೊರೆಯುವುದರಿಂದ ಮೊಗ್ಗು ಉದುರುತ್ತವೆ.<br>ನಂತರ ಕಾಯಿಗಳನ್ನು ಕೊರೆದು ತಿನ್ನುತ್ತವೆ. ಕಾಯಿಗಳಲ್ಲಿನ ರಂಧ್ರಗಳ ಮೂಲಕ ನೀರು ಸೇರಿ ಅವು ಕೊಳೆಯುತ್ತವೆ.<br>ಪ್ರತೀ 25 ಸಾಲು ಟೊಮ್ಯಾಟೊ ಬೆಳೆಗೆ ಒಂದು ಸಾಲು ಆಫ್ರಿಕನ್ ಟಾಲ್ ಚೆಂಡುಮಲ್ಲಿಗೆ ಗಿಡಗಳನ್ನು ನೆಡುವುದು. ಚೆಂಡುಮಲ್ಲಿಗೆಯ ಗಿಡಗಳ ವಯಸ್ಸು 35 – 40 ದಿನಗಳಾಗಿರಬೇಕು. ಶೇ. 10 ರಷ್ಟು ಹಾನಿಯ ಚಿಹ್ನೆಗಳು ಕಂಡು ಬಂದಲ್ಲಿ ಶೇ. 4 ಬೇವಿನ ಬೀಜದ ಕಷಾಯವನ್ನು ಸಿಂಪಡಿಸಬೇಕು<br>ಅಥವಾ<br>100 ಎಲ್ಇ. ಹೆಚ್ಎಎನ್ ಪಿವಿ ನಂಜಾಣು ಸಿಂಪರಣೆ.<br>ಪೀಡೆಯ ತೀವ್ರತೆ ಹೆಚ್ಚಾದಾಗ 1.0 ಗ್ರಾಂ ಮಿಥೋಮಿಲ್ 40 ಎಸ್.ಪಿ ಸಿಂಪರಣೆ ಅಗತ್ಯ. ಎಕರೆಗೆ 200 – 250 ಲೀಟರ್ ಸಿಂಪರಣಾ ದ್ರಾವಣ ಬಳಸಿಬೇಕು. |
| ತೆಂಗು | ಸುಳಿಕೊರೆಯುವ ರೈನೋಸರಸ್ ದುಂಬಿ | ಕಬ್ಬಿಣದ ಕೊಕ್ಕೆಯ ಸಹಾಚುದಿಂದ ರಂಧ್ರದಲ್ಲಿರುವ ದುಂಬಿಯನ್ನು ಹೊರಗೆ ತೆಗೆಯಬೇಕು. ನಚಿತರ ದುಂಬಿಯ ಬಾಧೆಯಿಚಿದ ಉಚಿಟಾದ ರಂಧ್ರದಲ್ಲಿ ಶೇ. 2ರ ಕ್ವಿನಾಲ್‌ಫಾಸ್ ಅಥವಾ ಶೇಕಡಾ 5ರ ಮೆಲಾಥಿಯಾನ್ ಮತ್ತು ಮರಳನ್ನು 1:1 ಪ್ರಮಾಣದಲ್ಲಿ ಬೆರೆಸಿದ ಮಿಶ್ರಣವನ್ನು ತುಂಬಬೇಕು. |
| ಶುಂಠಿ | ಗಡ್ಡೆ ಕೊಳೆರೋಗ | ರೋಗ ಚಿಹ್ನೆಗಳು: ರೋಗಕ್ಕೆ ತುತ್ತಾದ ಗಿಡಗಳ ಎಲೆಗಳ ತುದಿ ಭಾಗವು ಹಳದಿ ಬಣ್ಣಕ್ಕೆ ತಿರುಗಿ |

| | | |
|---|---|---|
| | | ಕ್ರಮೇಣ ಅವು ಹಳದಿಯಾಗುತ್ತವೆ. ಆಮೇಲೆ ಗಿಡಗಳು ಬಾಡಿ ಒಣಗುತ್ತವೆ. ಗಿಡದ ಬುಡ ಭಾಗವು ತೇವಾಂಶಯುಕ್ತ ಕಂದು ಬಣ್ಣದಿಂದ ಕೂಡಿ, ಮೃದುಗೊಂಡು ತದನಂತರ ಕೊಳೆಯುತ್ತದೆ. ಶುಂಠಿ ಗಡ್ಡೆಯ ಕೊಳೆ ರೋಗ ನಿಯಂತ್ರಣಕ್ಕಾಗಿ, ನೀರು ನಿಂತ ಪ್ರದೇಶದಲ್ಲಿನ ನೀರನ್ನು ಬಸಿಗಾಲುವೆ ಮುಖಾಂತರ ಹೊರಗೆ ಹಾಕಬೇಕು. ಹಾಗೂ ಪ್ರತಿ ಲೀ. ನೀರಿಗೆ 2 ಗ್ರಾಂ ಕ್ಯಾಪ್ಟನ್ ಅಥವಾ 2 ಗ್ರಾಂ ಮೆಟಲಾಕ್ಸಿಲ್ +ಮ್ಯಾಕೋಜೆಬ್ ದ್ರಾವಣದಿಂದ ರೋಗ ತಗುಲಿದ ಬುಡಭಾಗವನ್ನು ನೆನೆಸಬೇಕು. ಒಚಿದು ವೇಳೆ ಗಡ್ಡೆಯು ಸಂಪ್ರರ್ಣ ಹಾಳಾತದ್ದರೆ ಅಚಿತಹ ಗಡ್ಡೆಯನ್ನು ಕಿತ್ತು ಹಾಕಬೇಕು. |
| ಕಬ್ಬು | ಮೇಲುಗೊಬ್ಬರ ಮತ್ತು ಅಂತರ ಬೇಸಾಯ | ಮೇಲುಗೊಬ್ಬರವನ್ನು ಮೂರು ಸಲ ಕೊಡಬೇಕಾಗುತ್ತದೆ. ನಾಟಿಯಾದ 45ನೇ ದಿನದಲ್ಲಿ ಶಿಫಾರಸ್ಸು ಮಾಡಿದ ಶೇ. 20, 75 ನೇ ದಿನದಲ್ಲಿ ಶೇ. 30 ಮತ್ತು 105 ನೇ ದಿನದಲ್ಲಿ ಉಳಿದ ಶೇ. 40 ರಷ್ಟು ಸಾರಜನಕ ಒದಗಿಸುವ ರಸಗೊಬ್ಬರಗಳನ್ನು ಕೊಡಿ.ಅಂತರ ಬೇಸಾಯ ಮಾಡುವ ಸಮಯದಲ್ಲಿ ರಸ ಗೊಬ್ಬರವನ್ನು ನೇಗಿಲ ಸಾಲಿನಲ್ಲಿ ಪೈರಿನ ಎರಡೂ ಬದಿಯಲ್ಲಿ ಕೊಡುವುದರಿಂದ ರಸಗೊಬ್ಬರಗಳ ಸಮರ್ಥ ಬಳಕೆ ಸಾಧ್ಯ. ಇದು ಸಾಧ್ಯವಾಗದಿದ್ದಲ್ಲಿ ಪೈರಿನ ಸುತ್ತಲೂ 4 – 5 ಅಂಗುಲ ಆಳದ ಗುಳಿಗಳನ್ನು ಮಾಡಿ ಅದರಲ್ಲಿ ರಸ ಗೊಬ್ಬರಗಳನ್ನು ಕೊಡಬಹುದು. |

**ತಾಲ್ಲೂಕುವಾರು ಹವಾಮಾನದ ಮುನ್ಸೂಚನೆ (15–06–2024 ರಿಂದ 19–06–2024)**

**ಹೆಚ್.ಡಿ.ಕೋಟೆ**

| ಕಚಿಡಿಚಿಟಜಣಜಡಿ | 15.06.2024 | 16.06.2024 | 17.06.2024 | 18.06.2024 | 19.06.2024 |
|---|---|---|---|---|---|
| ಮಳೆ (ಮಿ.ಮೀ) | 0.2 | 4.9 | 0.2 | 3.4 | 2.6 |
| ಗರಿಷ್ಠ ಉಷ್ಣಾಂಶ (ಲಿಸೆ) | 28.5 | 22.9 | 24.9 | 29.7 | 28.6 |
| ಕನಿಷ್ಠ ಉಷ್ಣಾಂಶ (ಲಿಸೆ) | 20.3 | 18.5 | 18.3 | 19.2 | 18 |
| ಮೋಡ (ಆಕ್ಟ್ಸ್) | 8 | 8 | 8 | 8 | 8 |
| ಗರಿಷ್ಠ ಗಾಳಿಯ ತೇವಾಂಶ (%) | 85 | 91 | 93 | 92 | 94 |
| ಕನಿಷ್ಠ ಗಾಳಿಯ ತೇವಾಂಶ (%) | 54 | 78 | 67 | 55 | 56 |
| ಗಾಳಿಯ ವೇಗ (ಕಿ.ಮೀ/ ಗಂಟೆ) | 19 | 17 | 18 | 16 | 16 |
| ಗಾಳಿಯ ದಿಕ್ಕು( ಡಿಗ್ರಿ) | 248 | 248 | 248 | 248 | 248 |

**ಹುಣಸೂರು**

| ಕಚಿಡಿಚಿಟಜಣಜಡಿ | 15.06.2024 | 16.06.2024 | 17.06.2024 | 18.06.2024 | 19.06.2024 |
|---|---|---|---|---|---|
| ಮಳೆ (ಮಿ.ಮೀ) | 0.5 | 5.2 | 0.3 | 4.5 | 1.8 |
| ಗರಿಷ್ಠ ಉಷ್ಣಾಂಶ (ಲಿಸೆ) | 27.8 | 22.8 | 26.5 | 30.2 | 29.9 |
| ಕನಿಷ್ಠ ಉಷ್ಣಾಂಶ (ಲಿಸೆ) | 20 | 18.5 | 18.4 | 19 | 18.4 |
| ಮೋಡ (ಆಕ್ಟ್ಸ್) | 8 | 8 | 8 | 8 | 8 |
| ಗರಿಷ್ಠ ಗಾಳಿಯ ತೇವಾಂಶ (%) | 85 | 90 | 91 | 91 | 93 |
| ಕನಿಷ್ಠ ಗಾಳಿಯ ತೇವಾಂಶ (%) | 58 | 80 | 64 | 54 | 56 |
| ಗಾಳಿಯ ವೇಗ (ಕಿ.ಮೀ/ ಗಂಟೆ) | 19 | 18 | 18 | 17 | 15 |
| ಗಾಳಿಯ ದಿಕ್ಕು( ಡಿಗ್ರಿ) | 249 | 248 | 248 | 249 | 248 |

| ಕೆ.ಆರ್.ನಗರ | | | | | |
|---|---|---|---|---|---|
| **Parameter** | **15.06.2024** | **16.06.2024** | **17.06.2024** | **18.06.2024** | **19.06.2024** |
| ಮಳೆ (ಮಿ.ಮೀ) | 0.6 | 4 | 2.2 | 5.2 | 3.2 |
| ಗರಿಷ್ಠ ಉಷ್ಣಾಂಶ (ಲಿಸೆ) | 27.1 | 23.2 | 26.7 | 30.1 | 30.2 |
| ಕನಿಷ್ಠ ಉಷ್ಣಾಂಶ (ಲಿಸೆ) | 19.7 | 18.5 | 18.2 | 18.9 | 18.4 |
| ಮೋಡ (ಆಕ್ಟ್‌ಸ್) | 8 | 8 | 8 | 8 | 8 |
| ಗರಿಷ್ಠ ಗಾಳಿಯ ತೇವಾಂಶ (%) | 83 | 89 | 90 | 88 | 91 |
| ಕನಿಷ್ಠ ಗಾಳಿಯ ತೇವಾಂಶ (%) | 59 | 75 | 63 | 50 | 54 |
| ಗಾಳಿಯ ವೇಗ (ಕಿ.ಮೀ/ ಗಂಟೆ) | 20 | 19 | 18 | 17 | 15 |
| ಗಾಳಿಯ ದಿಕ್ಕು( ಡಿಗ್ರಿ) | 252 | 248 | 248 | 252 | 249 |

| ಮೈಸೂರು | | | | | |
|---|---|---|---|---|---|
| **Parameter** | **15.06.2024** | **16.06.2024** | **17.06.2024** | **18.06.2024** | **19.06.2024** |
| ಮಳೆ (ಮಿ.ಮೀ) | 1.6 | 6.1 | 2 | 7.2 | 6.3 |
| ಗರಿಷ್ಠ ಉಷ್ಣಾಂಶ (ಲಿಸೆ) | 28.1 | 22.9 | 24.5 | 29.2 | 28.8 |
| ಕನಿಷ್ಠ ಉಷ್ಣಾಂಶ (ಲಿಸೆ) | 19.5 | 17.8 | 17.3 | 18.6 | 17.7 |
| ಮೋಡ (ಆಕ್ಟ್‌ಸ್) | 8 | 8 | 8 | 8 | 8 |
| ಗರಿಷ್ಠ ಗಾಳಿಯ ತೇವಾಂಶ (%) | 81 | 88 | 90 | 89 | 89 |
| ಕನಿಷ್ಠ ಗಾಳಿಯ ತೇವಾಂಶ (%) | 51 | 70 | 65 | 51 | 54 |
| ಗಾಳಿಯ ವೇಗ (ಕಿ.ಮೀ/ ಗಂಟೆ) | 23 | 22 | 19 | 19 | 18 |
| ಗಾಳಿಯ ದಿಕ್ಕು( ಡಿಗ್ರಿ) | 249 | 248 | 248 | 249 | 248 |

| ನಂಜನಗೂಡು | | | | | |
|---|---|---|---|---|---|
| **Parameter** | **15.06.2024** | **16.06.2024** | **17.06.2024** | **18.06.2024** | **19.06.2024** |
| ಮಳೆ (ಮಿ.ಮೀ) | 1.1 | 4.2 | 0.2 | 6.1 | 3.8 |
| ಗರಿಷ್ಠ ಉಷ್ಣಾಂಶ (ಲಿಸೆ) | 27.4 | 23.2 | 24.1 | 28.1 | 27.8 |
| ಕನಿಷ್ಠ ಉಷ್ಣಾಂಶ (ಲಿಸೆ) | 18.8 | 17.1 | 16.8 | 18 | 16.8 |
| ಮೋಡ (ಆಕ್ಟ್‌ಸ್) | 8 | 8 | 8 | 8 | 8 |
| ಗರಿಷ್ಠ ಗಾಳಿಯ ತೇವಾಂಶ (%) | 78 | 84 | 86 | 85 | 85 |
| ಕನಿಷ್ಠ ಗಾಳಿಯ ತೇವಾಂಶ (%) | 48 | 65 | 62 | 51 | 53 |
| ಗಾಳಿಯ ವೇಗ (ಕಿ.ಮೀ/ ಗಂಟೆ) | 25 | 25 | 22 | 20 | 20 |
| ಗಾಳಿಯ ದಿಕ್ಕು( ಡಿಗ್ರಿ) | 248 | 248 | 248 | 248 | 248 |

| ಪಿರಿಯಾಪಟ್ಟಣ | | | | | |
|---|---|---|---|---|---|
| **Parameter** | **15.06.2024** | **16.06.2024** | **17.06.2024** | **18.06.2024** | **19.06.2024** |
| ಮಳೆ (ಮಿ.ಮೀ) | 1.1 | 7.4 | 0 | 4.4 | 0.3 |
| ಗರಿಷ್ಠ ಉಷ್ಣಾಂಶ (ಲಿಸೆ) | 27.1 | 23.1 | 26.8 | 30.1 | 30.1 |
| ಕನಿಷ್ಠ ಉಷ್ಣಾಂಶ (ಲಿಸೆ) | 19.9 | 18.8 | 18.8 | 19.1 | 18.8 |
| ಮೋಡ (ಆಕ್ಟ್‌ಸ್) | 8 | 8 | 7 | 8 | 8 |
| ಗರಿಷ್ಠ ಗಾಳಿಯ ತೇವಾಂಶ (%) | 87 | 91 | 92 | 92 | 93 |
| ಕನಿಷ್ಠ ಗಾಳಿಯ ತೇವಾಂಶ (%) | 65 | 83 | 67 | 57 | 60 |
| ಗಾಳಿಯ ವೇಗ (ಕಿ.ಮೀ/ ಗಂಟೆ) | 18 | 17 | 18 | 16 | 14 |
| ಗಾಳಿಯ ದಿಕ್ಕು( ಡಿಗ್ರಿ) | 249 | 248 | 248 | 249 | 248 |

| ಟಿ. ನರಸೀಪುರ | | | | | |
|---|---|---|---|---|---|
| **Parameter** | **15.06.2024** | **16.06.2024** | **17.06.2024** | **18.06.2024** | **19.06.2024** |
| ಮಳೆ (ಮಿ.ಮೀ) | 0.9 | 7.8 | 1.3 | 1.8 | 0.5 |
| ಗರಿಷ್ಠ ಉಷ್ಣಾಂಶ (ಲಿಸೆ) | 28.3 | 24.3 | 23.8 | 29.4 | 29.3 |
| ಕನಿಷ್ಠ ಉಷ್ಣಾಂಶ (ಲಿಸೆ) | 19.6 | 18 | 17.2 | 18.8 | 17.9 |
| ಮೋಡ (ಆಕ್ಟ್‌ಸ್) | 8 | 8 | 8 | 8 | 8 |
| ಗರಿಷ್ಠ ಗಾಳಿಯ ತೇವಾಂಶ (%) | 76 | 83 | 86 | 82 | 81 |
| ಕನಿಷ್ಠ ಗಾಳಿಯ ತೇವಾಂಶ (%) | 46 | 60 | 62 | 48 | 48 |
| ಗಾಳಿಯ ವೇಗ (ಕಿ.ಮೀ/ ಗಂಟೆ) | 25 | 24 | 20 | 20 | 20 |
| ಗಾಳಿಯ ದಿಕ್ಕು( ಡಿಗ್ರಿ) | 252 | 248 | 248 | 248 | 248 |

- ರೈತರು **"ದಾಮಿನಿ"** ಎಂಬ ತಂತ್ರಾಂಶವನ್ನುಗೂಗಲ್ ಪ್ಲೇ ಸ್ಟೋರ್‌ನಿಂದ ಡೌನ್ ಲೋಡ್ ಮಾಡಿಕೊಂಡರೆ ಇದರಿಂದ ಮಿಂಚಿನ ಮನ್ಸೂಚನೆಯನ್ನು ಅತ್ಯಂತ ನಿಖರವಾಗಿ ತಿಳಿಯಬಹುದು.
- ಹಾಗೆಯೇ "ಮೌಸಮ್" ಮತ್ತು "ಮೇಘದೂತ್" ತಂತ್ರಾಂಶಗಳಿಂದ ಮಳೆಯ ಮುನ್ಸೂಚನೆ ಮತ್ತು ಕೃಷಿ ಸಲಹೆಗಳನ್ನು ಪಡೆಯಲು ಸೂಚಿಸಲಾಗಿದೆ.

ಹೆಚ್ಚಿನ ಮಾಹಿತಿಗಾಗಿ ರೈತರು ದೂರವಾಣಿ ಮೂಲಕ ಡಾ॥. ಸಿ. ರಾಮಚಂದ್ರ, ಹಿರಿಯ ಕ್ಷೇತ್ರ ಅಧೀಕ್ಷಕರು/ ಡಾ. ಸುಮಂತ್ ಕುಮಾರ್, ಜಿ. ವಿ, ಸಹ ಸಂಶೋಧಕರು, ದೂರವಾಣಿ ಸಂಖ್ಯೆ. 08212591267/ 9535345814 ರವರನ್ನು ಸಂಪರ್ಕಿಸಬಹುದು.

ಕೃಷಿ ಹವಾಮಾನ ಕ್ಷೇತ್ರ ವಿಭಾಗ,
ನಾಗನಹಳ್ಳಿ, ಮೈಸೂರು